ಅವರನ್ನು ಭವಿಷ್ಯಕ್ಕಾಗಿ ತಯಾರಿ ಮಾಡುವುದು ಅನ್ನೋದೆಲ್ಲ ಶುರುವಾಗಿಬಿಡುತ್ತದೆ. ಹಾಗೆಲ್ಲ ಬರೀಬಾರದು ಅಂತೇನಿಲ್ಲ, ಆದರೆ ಅದು ಸೃಜನಶೀಲ ಚಟುವಟಿಕೆಯಾಗದು, ನನ್ನೊಳಗಿಗೆ ಒಂದು ಬಿಡುಗಡೆಯನ್ನು, ಒಂದು ಸುಖವನ್ನ ಕೊಡಲಾರದು. ಅಂಥದರ ಉದ್ದೇಶ ಬೇರೆ. ಇಂಥದು ದೊಡ್ಡವರಿಗೂ ಸಾಕಷ್ಟು ಬೇಕಾಗಿರುತ್ತದೆ, ಅದು ಬರುತ್ತಲೂ ಇರುತ್ತದೆ. ಮಕ್ಕಳ ಸಾಹಿತ್ಯ ಎಂದೊಡನೆ ಈ ಹೋಲ್ಸಾಲ್ ಮನೋಭಾವನೆಯನ್ನು ನಾವು ಬಿಡಬೇಕು. ಪ್ರಾರಂಭದ ಹಂತದಲ್ಲಿ ಎಲ್ಲಾ ಭಾಷೆಗಳಲ್ಲಿ ಅದೆಲ್ಲ ಇರೋದು ಸಹಜ. ಈಗ ಸಾಕಷ್ಟು ಕಾಲ ಸಂದುಹೋಗಿದೆ. ಸಾಕಷ್ಟು ಬಲು ಆಕರ್ಷಿಸುವ ಸೃಜನಶೀಲ ಮನಸ್ಸುಗಳು ಈ ಮಕ್ಕಳ ಸಾಹಿತ್ಯ ಅನ್ನೋದರಲ್ಲಿ ಕಾಣಿಸಿಕೊಂಡಾಗಿದೆ. ಇಂಥ ಬರವಣಿಗೆಯ ಆಕಾಂಕ್ಷೆಯವರು ತಮ್ಮ ಬರವಣಿಗೆಗೆ ಪುಷ್ಟಿ ತಂದುಕೊಳ್ಳಲು ತಮಗೆ ಬೇಕಾದುದನ್ನು ಹುಡುಕಿಕೊಂಡು ಹೋಗುತ್ತಲೇ ಇರುತ್ತಾರೆ. ಅವರಿಗೆ ದಾರಿ ಕಂಡೇ ಕಾಣುತ್ತದೆ. ನಮ್ಮ ನಡುವೆ ಒಂದಿಷ್ಟು ಅಧ್ಯಯನದ ಕಣ್ಣುಗಳು, ವಿಮರ್ಶೆಯ ನೋಟಗಳು ಹೆಚ್ಚು ಹೆಚ್ಚು ನಡೆದರೆ ಒಂದಿಷ್ಟು ಸಾಣೆಗೆ ಹಚ್ಚುವ ಕೆಲಸ ಆಗುತ್ತದೆ. ನಮ್ಮ ನಮ್ಮ ದಾರಿ ನಾವು ನಾವೇ ಕಂಡುಕೊಳ್ಳುವುದು ಸೂಕ್ತ.

**◆ ಮಕ್ಕಳಿಗಾಗಿ ಬರೆಯಲು ಹೊರಡುವವರು ಏನಾದರೂ ಸಿದ್ಧತೆ ನಡೆಸಬೇಕೆ? ಮಕ್ಕಳ ಸಾಹಿತಿಗಳಿಗೆ ಇರಬೇಕಾದ ಮೂಲಭೂತ ಲಕ್ಷಣಗಳೇನು?**

ಮಕ್ಕಳಿಗಾಗಿ ಬರೆಯುವುದು ಎನ್ನುವ ಮಾತನ್ನು ಕೇಳಿದಾಗ ವ್ಯಗ್ರವಾಗುವ, ಬೇಸರ ಪಡುವ ಅನೇಕ ಲೇಖಕರನ್ನು ನಾನೀಗ ಸಂಧಿಸಿ ಆಗಿದೆ. ಮತ್ತೊಬ್ಬರಿಗಾಗಿ ಅಂತ ನಾನು ಬರೆಯುವುದಾದರೆ ಅದು ಕೃತಕ ಸೃಷ್ಟಿಯೇ ಆಗುತ್ತದೆ. ದೀರ್ಘ ರಚನೆಗಳನ್ನು ಮಾಡಿ ಹೆಸರು ಮಾಡಿರುವ ಸಿ.ಎಸ್. ಲೂಯಿಸ್, 'ಹೀಗೆಲ್ಲ ಬರೆಯುವುದು ನನಗೆ ಅಗತ್ಯವಾಗಿ ಕಂಡ ಅಭಿವ್ಯಕ್ತಿಯ ಮಾರ್ಗ' ಅನ್ನುತ್ತಾನೆ. ಇಂಗ್ಲಿಷ್ ಕವಿ ಆಡೆನ್ ಮಕ್ಕಳ ಕಾವ್ಯದ ಸಂದರ್ಭದಲ್ಲಿಯೇ ಈ ಕೃತಕತೆಯ ಆಭಾಸದ ಕುರಿತು ಕಟುವಾಗಿಯೇ ಮಾತನಾಡಿರುವುದಿದೆ. ಇಂಗ್ಲೀಷಿನ ಮಕ್ಕಳ ಕಾವ್ಯವನ್ನು ದೀರ್ಘ ಅವಧಿಯಿಂದ ಅಧ್ಯಯನ ಮಾಡುತ್ತ ಬಂದಿರುವ ಮೊರಾಗ್ ಸ್ಟೈಲ್ ಅವರು ಆಡೆನ್‌ನ ಈ ಮಾತನ್ನು ಪದೇಪದೇ ಮುಂದಿರಿಸಿಕೊಳ್ಳುತ್ತಲೇ ಚರ್ಚಿಸಿದ್ದಾರೆ. ಮಕ್ಕಳಲೋಕ ಅಥವಾ ಬಾಲ್ಯದ ಲೋಕಕ್ಕೆ ಹೊರಳಿ, ಅಲ್ಲೇನೋ ತಮಗಾಗಿ ಅನನ್ಯವಾದುದನ್ನು ಕಂಡವರೇ 'ಮಕ್ಕಳ ಸಾಹಿತ್ಯ' ಅನ್ನುವ ಬರವಣಿಗೆಯನ್ನು ಮಾಡಬೇಕು. ಅಂದಾಗ ಅದು ತನ್ನದೇ ಆದ ವಿಶಿಷ್ಟತೆಯನ್ನು ಹೇಳುತ್ತದೆ. ಹಾಗಾಗಿ ಈ ಬರವಣಿಗೆಯೂ ನಮ್ಮೊಳಗಿನ ಒಲವಾಗಿಯೇ, ತೀವ್ರತೆಯಾಗಿಯೇ ಬರಬೇಕು. ಇಷ್ಟೇ, ವಿಸ್ತೃತ ಓದು, ವಿಭಿನ್ನ ಓದು, ಚರ್ಚೆಗಳು ಇವು ನಮ್ಮನ್ನು ಹೆಚ್ಚು ಸೊಗಸಿಗೆ ತರುತ್ತವೆ. ವ್ಯುತ್ಪತ್ತಿ ಎನ್ನುವ ಕುರಿತು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಾಕಷ್ಟು ಮಾತಾಡಿದ್ದಾಗಿದೆ. ಮಕ್ಕಳ ಸಾಹಿತ್ಯದ ಕಡೆಗೆ ಹೊರಳುವ ಬರಹಗಾರನಿಗೆ ಮೂಲಭೂತ ಅಂತ ಪ್ರತ್ಯೇಕ ಲಕ್ಷಣಗಳೇನು ಇರೋದಿಲ್ಲ, ಎಲ್ಲರಹಾಗೇ ಅವನೂ. ಇಷ್ಟೇ ಅವನು ಆಯ್ದುಕೊಂಡುದು – ಮಕ್ಕಳ ಲೋಕ, ಬಾಲ್ಯದ ಲೋಕ. ಪೀಟರ್ ಹಾಲಿಂಡೇಲ್ 'child specific' ಅನ್ನುತ್ತಾನೆ, ನಾನು 'childhood specific' ಎನ್ನುತ್ತೇನೆ. ಹೀಗಂದುಕೊಳ್ಳುವುದು ಅದೊಂದು ಮಿತಿಯಲ್ಲವೇ ಅನ್ನಬಹುದು. ಏನು ಮಾಡುವುದು, ಅದು ನಮ್ಮೊಳಗಿನ ಒಂದು ಸಹಜದ್ದೇ ಆದ ಸಂಗತಿ. ಇದರಲ್ಲೇ ಅಪರೂಪದ ಸಾಧ್ಯತೆ ಕಂಡವರು, ತೃಪ್ತಿ ಕಂಡವರು ಇದ್ದಾರೆ, ಅಂಥವರು ಅದನ್ನು ಮಿತಿಯಾಗಿ ಕಂಡಿಲ್ಲ.

**◆ ಮಕ್ಕಳ ಸಾಹಿತ್ಯದ ಅಭಿವೃದ್ಧಿಗೆ ಆಗಬೇಕಾದುದೇನು? ಮಕ್ಕಳಲ್ಲಿ ಓದುವ ಅಭ್ಯಾಸವನ್ನು ಬೆಳೆಸುವುದು ಹೇಗೆ?**

ಮಕ್ಕಳ ಸಾಹಿತ್ಯದ ಓದುಗರು, ಅದನ್ನ ಬಯಸುವವರು, ಸಹಜವಾಗಿಯೇ ಇದು ನಮ್ಮೊಳಗಿನದಕ್ಕೆ ಬೇಕು ಅನ್ನುವವರು. ಅವರು ಕೇವಲ ಮಕ್ಕಳೇ ಅಲ್ಲ. ಮಕ್ಕಳ ಓದುಗ ಬಳಗ ಇಂಥ ಸಾಹಿತ್ಯಕ್ಕೆ ಸಿಗುವುದು ಸಹಜವೇ ಸಹಜ. ಏಕೆಂದರೆ ಅದು ಬಾಲ್ಯದ ಲೋಕವೇ. ಅದೊಂದು incidental ಎನ್ನುವ ಮಾತು ಇಂಗ್ಲಿಷಿನ ಅನೇಕ ಬರಹಗಾರರಲ್ಲಿ ಕೇಳಿದೆ. ನಾನು ಅದು subsequent, ಅಂದರೆ ತನ್ನತಾನೇ ಸಹಜವಾಗಿ ಆಗಿಬಿಡುವ ಪರಿಣಾಮ ಅಂದುಕೊಳ್ಳುತ್ತೇನೆ. ಹಿರಿಯ